೫)	ವರ್ಷ	ಕ್ರಿಮಿನಲ್ ಮೊಕದ್ದಮೆ ಹೂಡಿದೆ	ಸಿವಿಲ್ ಮೊಕದ್ದಮೆ ಹೂಡಿದೆ
	೧೯೮೩-೮೪	೨	೫
	೧೯೮೪-೮೫	೨	೬
	೧೯೮೫-೮೬	೩	೫

ರೈತರ ಸಾಲದ ಬಡ್ಡಿ ಮನ್ನಾ ಕುರಿತು

೧೪೨೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದಿಂದ ವಿವಿಧ ಸಹಕಾರಿ ಸಂಸ್ಥೆಗಳಿಗೆ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ನೀಡಬೇಕಾಗಿರುವ ''ರೈತರ ಸಾಲದ ಬಡ್ಡಿ ಮನ್ನಾ'' ಬಾಬ್ತಿನ ಹಣದ ಒಟ್ಟು ಮೊತ್ತವೆಷ್ಟು ?

ಆ) ವಿವಿಧ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಭೂ ಸಂಧಾರಣೆ ಕಾಯಿದೆಯಡಿ ನೀಡಿರುವ ಸಾಲದ ಮೊತ್ತವೆಷ್ಟು ? ಇದರಲ್ಲಿ ಸರ್ಕಾರವು ಕೊಡಬೇಕಾಗಿರುವ ಹಣದ ಮೊತ್ತವೆಷ್ಟು ?

ಇ) ಆಡಳಿತಾತ್ಮಕ ಖರ್ಚುಗಳಿಗೆ ಕೂಡ ಹಣ ಇಲ್ಲದೆ ಸಹಕಾರಿ ಸಂಸ್ಥೆಗಳು ರೋಗಗ್ರಸ್ಥವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಗಳು).—

ಅ) ೧೯೮೬-೮೭ನೇ ಸಾಲಿನ ಅಲ್ಪಾವಧಿ ಮತ್ತು ಮಧ್ಯಮಾವಧಿ ಚಾಲ್ತಿ ಸಾಲಗಳ ವಸೂಲಾತಿಗೆ ಸಂಬಂಧಿಸಿದಂತೆ ರೂ. ೪,೨೧ ಕೋಟಿ ಸಹಾಯ ಧನದ ಮೊತ್ತವನ್ನು ಸರ್ಕಾರವು ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ನೀಡಬೇಕಾಗಿರುತ್ತದೆ.

ಆ) ೩೦-೬-೮೭ರ ವರೆಗೆ ಭೂ ಸುಧಾರಣಾ ಕಾಯಿದೆಯಡಿ, ವಿವಿಧ ಪ್ರಾಥಮಿಕ ಕೃಷಿ ಪಂತರ್ತ್ತ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ರೂ.೧೧೨೯.೦೫ ಲಕ್ಷಗಳ ಸಾಲವನ್ನು ನೀಡಿರುತ್ತವೆ. ಇದರಲ್ಲಿ ಯಾವ ಹಣವನ್ನು ಸರ್ಕಾರವು ಕೊಡಬೇಕಾಗಿಲ್ಲ.

ಇ) ಕೆಲವು ಸಹಕಾರ ಸಂಘಗಳು ಆರ್ಥಿಕವಾಗಿ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರೆವಿನ್ಯೂ ಜಾಗ ಅತಿಕ್ರಮಣ ಮಂಜೂರಿ ಕುರಿತು

೧೪೫೯. ಶ್ರೀ ಗೋಪಾಲ ಮುಕ್ರಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ, ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ರೆವಿನ್ಯೂ ಜಾಗದಲ್ಲಿ ಅತಿಕ್ರಮಣ ಮಾಡಿಕೊಂಡು ಮನೆ ಹಾಗೂ ಜಮೀನುಗಳನ್ನು ೧೫-೨೦ ವರ್ಷಗಳಿಂದ ಎಲ್ಲಾ ವರ್ಗದ ಜನರು ಜೀವನ ಸಾಗಿಸುತ್ತಾ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದಲ್ಲಿ, ಯಲ್ಲಾಪುರ, ಸಿರ್ಸಿ, ಸಿದ್ದಾಪುರದಲ್ಲಿ ಎಷ್ಟು ಮಂದಿ ಮನೆಗಳನ್ನು ಹಾಗೂ ಜಮೀನುಗಳನ್ನು ಉಪಯೋಗಿಸುತ್ತಿದ್ದಾರೆ ?

ಇ) ಇದರ ಬಗ್ಗೆ ಸರ್ಕಾರಕ್ಕೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು, ಎಷ್ಟು ಕುಟುಂಬಗಳ ಜನರಿಗೆ ಸರಕಾರವು ಜಾಗವನ್ನು ಮಂಜೂರು ಮಾಡದೆ, ಉಳಿದವರಿಗೆ ಜಾಗ ಮಂಜೂರು ಮಾಡಲು ಸರಕಾರವು ಏನು ಕ್ರಮ ಕೈಗೊಂಡಿದೆ ?